ನಿಲ್ದಾಣಗಳಲ್ಲಿ ತೀರಾ ಡಾಂಬರ್ ಹೋಗಿದ್ದರೆ ಅದನ್ನು ರಿಪೇರಿ ಮಾಡಿಸುವುದಕ್ಕೆ ಅಧಿಕಾರಿಗಳಿಗೆ ತಿಳಿಸುತ್ತೇನೆ.

ಶ್ರೀ ಬಾಬುರೆಡ್ಡಿ ಏ. ತಂಗಳ್.—ದೂರವಾಣಿ ಸಂಪರ್ಕ ಒದಗಿಸುವಂತಹ ಬಸ್ ನಿಲ್ದಾಣಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಆಮೀನಗಡ್, ಹುನಗುಂದ, ಬೀಳಗಿ, ಚಿಡಚಣ ಮತ್ತು ಜಳಕಿ ಬಸ್ ನಿಲ್ದಾಣಗಳಿಗೆ ಟೆಲಿಫೋನ್ ಸೌಕರ್ಯವನ್ನು ಒದಗಿಸುವ ಯೋಜನೆಯಿದೆಯೆಂದು ಹೇಳಿದ್ದಾರೆ. ೧೪ ಬಸ್ ನಿಲ್ದಾಣಗಳಿಗೆ ಟೆಲಿಫೋನ್ ಸೌಕರ್ಯ ಹೊಂದಿಲ್ಲವೆಂದು ತಿಳಿಸಿದ್ದಾರೆ. ತಾಲ್ಲೂಕು ಕೇಂದ್ರದಲ್ಲಿ ರಮಂತಹ ಬಸ್ ನಿಲ್ದಾಣಗಳಿಗೆ ಟೆಲಿಫೋನ್ ಸೌಕರ್ಯವನ್ನು ಕೊಡಬೇಕು. ಬಿಜಾಪುರದ ರಾಜ್ಯ ರಸ್ತೆ ಸಾರಿಗೆ ವಿಭಾಗವು ಕರ್ನಾಟಕದ ಆದಾಯದಲ್ಲಿ ಕಳೆದ ಪತ್ತಾರು ವರ್ಷಗಳಲ್ಲಿ ಇಡೀ ರಾಜ್ಯಕ್ಕೇ ಮೊದಲನೆಯದಾಗಿದೆ. ಅದಕ್ಕೆ ಅವರದ್ದೇ ಆದಂತಹ ದಾಖಲೆ ಇದೆ. ಇದು ಮಾನ್ಯ ಸಚಿವರಿಗೂ ಕೂಡ ಗೊತ್ತಿದೆ. ಇಡೀ ರಾಜ್ಯದ ಕೆ.ಎಸ್.ಆರ್.ಟಿ.ಸಿ. ಆದಾಯಕ್ಕೆ ಹೆಚ್ಚಿನ ಆದಾಯ ನಮ್ಮ ಬಿಜಾಪುರ ಡಿಪೋದಿಂದ ಬರುತ್ತಿದೆ. ಆದರೆ ಅಲ್ಲಿ ಸ್ಟಾಂಡ್‌ಗಳ ಸ್ಥಿತಿ ಕೆಟ್ಟಿದೆ. ಇಲ್ಲಿ ಅಧಿಕಾರಿಗಳು ಕೊಟ್ಟಿರುವ ವಿವರದ ತಪ್ಪು ಇದೆ ಆದರೆ ಮಂತ್ರಿಗಳದಲ್ಲ. ೨೫ ಹಳ್ಳಿಗಳಿಗೆ ಬಸ್ ನಿಲ್ದಾಣಗಳಲ್ಲಿ ನೀರಿನ ಸೌಕರ್ಯ ಇದೆ ಎಂದಿದ್ದಾರೆ. ಇದು ಸರಿಯಲ್ಲ. ನನ್ನ ಕ್ಷೇತ್ರವಾದ ಬೀಳಗಿ ಬಸ್ ನಿಲ್ದಾಣದಲ್ಲಿ ನೀರಿನ ಸೌಕರ್ಯ ಒದಗಿಸುವುದರಿಂದ ಪ್ರಯಾಣಿಕರು ತೊಂದರೆ ಪಡುತ್ತಿದ್ದಾರೆ. ಪಕ್ಕದ ಹೋಟೆಲಿಗೆ ನೀರಿಗಾಗಿ ಹೋದರೆ ಚಾ ತಗೊಳ್ರಿ ನೀರು ಕೊಡುತ್ತೇವೆ ಎನ್ನುತ್ತಾರೆ. ಆದ್ದರಿಂದ ಬೀಳಗಿ ನಿಲ್ದಾಣಕ್ಕೆ ನೀರಿನ ಸೌಕರ್ಯ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಪಿ ಜಿ.ಆರ್. ಸಿಂಧ್ಯ.—ಮಾಡಿಸಿಕೊಡುತ್ತೇನೆ.

ಬಾಕಿಯಿರುವ ಮಾರಾಟ ತೆರಿಗೆ ಬಗ್ಗೆ

೧೮೧೧. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೫೭-೮೮ನೇ ಸಾಲಿನಿಂದ ಈವರೆಗೆ ಬಾಕಿ ಇರುವ ಮಾರಾಟ ತೆರಿಗೆಯ ಮೊತ್ತವೆಷ್ಟು ಹಾಗೂ ಬಾಕಿದಾರರಿಂದ ವಸೂಲ್ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ದಿನಾಂಕ ೩೧-೦೨-೧೯೮೮ರಂದು ಇದ್ದಂತೆ ವಸೂಲಾಗಬೇಕಾದ ಬಾಕಿ ಮಾರಾಟ ತೆರಿಗೆಯು ರೂ. ೧೩೬.೨೧ ಕೋಟಿ. ಮಾರಾಟ ತೆರಿಗೆ ಬಾಕಿಯನ್ನು ವಸೂಲು ಮಾಡಲು ವಿಶೇಷ ಏರ್ಪಾಡುಗಳನ್ನು ಮಾಡಲಾಗಿದೆ. ಕೋರ್ಟಿನಿಂದ ತಡೆಯಾಜ್ಞೆ ಇರುವಂತಹ ಪ್ರಕರಣಗಳಲ್ಲಿ ತಡೆಯಾಜ್ಞೆಗಳನ್ನು ಮುಕ್ತಗೊಳಿಸಲು ಕ್ರಮ ಕೈಗೊಳ್ಳಲು ರಾಜ್ಯ ಅಡ್ವೋಕೇಟ್ ಜನರಲ್ ರವರನ್ನು ಕೋರಲಾಗಿದೆ. ಕಾಯಿದೆ ಪ್ರಕಾರ ಲಭ್ಯವಿರುವ ಎಲ್ಲಾ ಸಾಧ್ಯತೆಗಳ ಅವಕಾಶಗಳನ್ವಯ ಕ್ರಮ ಕೈಗೊಂಡ ನಂತರವೂ ತೆರಿಗೆ ವಸೂಲಾಗದಿರುವ ಪ್ರಕರಣಗಳನ್ನು ಭೂಕಂದಾಯ ಬಾಕಿಯಂತೆ ವಸೂಲಿ ಮಾಡಲು ಕಂದಾಯ ಇಲಾಖೆ ಅಧಿಕಾರಿಗಳಿಗೆ ಕಳುಹಿಸಲಾಗುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೩೧-೦೨-೮೮ರವರೆಗೆ ೧೩೬ ಕೋಟಿ ಅರಿಯರ್ಸ್ ಇದೆ ಎಂದಿದ್ದಾರೆ. ಇದರಲ್ಲಿ ಕೋರ್ಟ್ ತಡೆಯಾಜ್ಞೆಯಿಂದ ಎಷ್ಟು ಇದೆ ಮತ್ತು ಟ್ರಿಬ್ಯೂನಲ್‌ನಲ್ಲಿ ಡಿಪಾರ್ಟ್‌ಮೆಂಟ್ ಅಧಿಕಾರಿಗಳ ಸ್ಟೇ ಆರ್ಡರ್ ಪ್ರಭಾವದಿಂದ ಎಷ್ಟು ರೆಕವರಿ ಆಗುವುದು ನಿಂತಿದೆ ಮತ್ತು ಲೇಟೆಸ್ಟ್ ಮಾರ್ಚ್ ಅಂತ್ಯದ ವರೆಗೆ ಎಷ್ಟು ಅರಿಯರ್ಸ್ ಇದೆ ಹೇಳಿ ?

ಶ್ರೀ ರಾಮಕೃಷ್ಣ ಹೆಗಡೆ —ಕೋರ್ಟ್ ಟ್ರಿಬ್ಯೂನಲ್ ಮುಂತಾದ ಅಥಾರಿಟಿಗಳಲ್ಲಿ ಸ್ಟೇ ಆರ್ಡರ್ ಕೊಟ್ಟು ಬಾಕಿ ಇರುವುದು ೬೪.೭೭ ಕೋಟಿ ರೂಗಳು ಇದರಲ್ಲಿ ಸುಪ್ರೀಂ ಕೋರ್ಟಿನಲ್ಲಿ ೨೪ ಕೋಟಿ ರೂಪಾಯಿ ಗಳಷ್ಟು ಕಾಫಿ ಬೋರ್ಡಿನಿಂದ ಬರಬೇಕು. ಇನ್ನು ಸುಪ್ರೀಂ ಕೋರ್ಟಿನಲ್ಲಿ ಕಳೆದ ಏರಡು ವರ್ಷದಲ್ಲಿ ಕೇಸಿನ ವಿಚಾರಣೆ ನಡೆಯುತ್ತಿದ್ದ ಕಳೆದ ನಾಲ್ಕೈದು ವರ್ಷದ್ದು ಸೇರಿಸಿದರೆ ೧೦೦ ಕೋಟಿ ಅದರದೇ ಆಗಬಹುದು Recoverable rrears 34 crores 52 lakhs.... Amount which

are recoverable by authorities-department other than Commercial Tax Department. Revenue Department-as arrears of land revenue. ಈಗಾಗಲೇ ಡಿಕ್ರಿಯಾಗಿ ನಾವು ರಿಕವರಿ ಮಾಡುವುದಕ್ಕೆ ಪ್ರಯತ್ನಿಸುತ್ತಿರುವ ೭೪ ಕೋಟಿಯಲ್ಲಿ ೧೧ ಕೋಟಿ ೩೩ ಲಕ್ಷ ಇದಕ್ಕೆ ಸಂಬಂಧಪಟ್ಟಿದ್ದು. ಇದಾದ ಮೇಲೆ amount recoverable by Officers of the Commercial Tax Department and action taken for recovery-23 crores 19 lakhs.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ನಾನು ಕೇಳಿದ್ದು ಲೇಟೆಸ್ಟ್ ಆಗಿ ಅಂದರೆ ಮಾರ್ಚ್ ಎಂಡಿಂಗ್‌ಗೆ ಇರುವ ಬಾಕಿ ಎಷ್ಟು ಎನ್ನುತಕ್ಕಂಥಾದ್ದು. ಆಮೇಲೆ ಇದು ಸುಪ್ರೀಂ ಕೋರ್ಟಿನಿಂದ ತಡೆಯಾಜ್ಞೆ ಬಂದ ಮೇಲೆ ೭೪ ಕೋಟಿ ರೂಪಾಯಿಗಳನ್ನು ಕಾಫಿ ಬೋರ್ಡಿನವರು ಕೊಡಬೇಕೆಂದು ತೀರ್ಮಾನವಾಗಿದೆ. ಈ ೭೪ ಕೋಟಿ ರೂಪಾಯಿಗಳು ಕೈ ಬಿಡಬೇಕೆಂದು ಏನಾದರೂ ನಿರ್ಧಾರವಾಗಿದೆಯೋ ದಯಮಾಡಿ ತಿಳಿಸಿ ? ಆಮೇಲೆ ಇನ್ನು ಉಳಿದಂತಹ ಬಾಕಿ ಹಣವನ್ನು ವಸೂಲಿ ಮಾಡಲಂ ಏನು ಸ್ಟೆಪ್ಸ್ ತೆಗೆದುಕೊಂಡಿದ್ದೀರಿ. ? ಈ ಹಣವನ್ನು ಬೇಗ ವಸೂಲಿ ಮಾಡಿದರೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸ್ವಲ್ಪ ಸಹಾಯವಾಗಬಹುದು. ಸಣ್ಣ ಪುಟ್ಟ ಜನತಾ ಹೌಸಿಂಗ್‌ಗಳ ಮೇಲೆ ಲ್ಯಾಂಡ್ ರೆವಿನ್ಯೂ ಇರುವಂತಾದ್ದನ್ನು ನಿರ್ಜೀವನೇ ಇಸವಿಯಿಂದ ರೆವಿನ್ಯೂ ಇಲಾಖೆಯವರು ವಸೂಲಿ ಮಾಡುತ್ತಿದ್ದಾರೆ. ಒಬ್ಬ ರೈತನ ಮೇಲೆ ಕೇವಲ ೧೦-೨೦ ರೂಪಾಯಿಗಳು ಇರುತ್ತದೆ. ಅದನ್ನೇ ವಸೂಲಿ ಮಾಡಲಾಗುವುದಿಲ್ಲ. ಇನ್ನು ಈ ಲಕ್ಷಾಂತರ ರೂಪಾಯಿಗಳನ್ನು ವಸೂಲಿ ಮಾಡುವುದಕ್ಕೆ ತಾವೇನು ಕ್ರಮ ತೆಗೆದುಕೊಂಡುರಿಕವರಿ ಮಾಡುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ — ಮಾನ್ಯ ಅಧ್ಯಕ್ಷರೇ, ಅವರ ಉಪ ಪ್ರಶ್ನೆಗೆ ಉತ್ತರವಾಗಿ ೩೧-೩-೧೯೮೮ಕ್ಕೆ ಎಷ್ಟಾಗುತ್ತದೆಂದು ಹೇಳಿದ್ದೇನೆ. ಈಗ ಲೇಟೆಸ್ಟ್ ಫಿಗರ್ಸ್ ನಮಗೆ ಜೂನ್ ಕೊನೆಗೆ ಗೊತ್ತಾಗುತ್ತದೆ. ಅದರೊಳಗೆ ಗೊತ್ತಾಗುವುದಿಲ್ಲ ಸಾಮಾನ್ಯವಾಗಿ ಕಾಫಿ ಬೋರ್ಡ್‌ನವರು ಕೊಡಬೇಕಾಗಿರುವಂತದ್ದನ್ನು ಬಿಟ್ಟರೆ ಉಳಿದಿದ್ದು ಒಂದು ೩೦-೪೦ ಕೋಟಿ ರೂಪಾಯಿಗಳು. ಯಾರು ಬಾಕಿ ಇರುತ್ತಾರೋ ಅವರಿಂದ ವಸೂಲಿ ಮಾಡುತ್ತಿದ್ದರೂ ಮತ್ತೇ ಮತ್ತೇ ಬಾಕಿ ಇದ್ದೇ ಇರುತ್ತದೆ. ಆಮೇಲೆ ಕಾಫಿ ಬೋರ್ಡಿನವರ ಬಾಕಿ ವಸೂಲಿ ಮಾಡುವುದಕ್ಕೆ ನಾನು ಮಾನ್ಯ ಸದಸ್ಯರ ಸಹಾಯವನ್ನು ಕೇಳುತ್ತೇನೆ. ಅವರ ಸಹಾಯವೆಂದರೆ ಅವರ ಪಕ್ಷದ್ದು ನಾವೆಲ್ಲರೂ ಹೋಗಿ ಕೇಂದ್ರ ಸರ್ಕಾರದ ಕಾಮರ್ಸ್ ಮಿನಿಸ್ಟ್ರಿಯನ್ನು ಕೇಳೋಣ. ಸುಪ್ರೀಂ ಕೋರ್ಟಿನವರು ಯಾವರೀತಿ ಕೊಡಬೇಕೆನ್ನುವುದನ್ನು ಬರೆದಿದ್ದಾರೆ ಎಷ್ಟು ದಿವಸದಲ್ಲಿ ಕೊಡಬೇಕೆನ್ನುವುದು ಬರೆದಿದ್ದಾರೆ. ಯಾವ ಬಡ್ಡಿ ಕೊಡಬೇಕೆನ್ನುವುದು ಬರೆದಿದ್ದಾರೆ. ಒಟ್ಟು ಎಲ್ಲಾ ಸೇರಿದರೆ ಅವರಿಂದ ನಮಗೆ ನೂರು ಕೋಟಿ ರೂಪಾಯಿಗಳು ಬರಬೇಕಾಗುತ್ತದೆ ಆ ಹಣ ಬಂದರೆ ನಮಗೆ ಅವಶ್ಯಕವಾಗಿ ಕೆಲವು ಯೋಜನೆ ಳನ್ನು ತೆಗೆದುಕೊಳ್ಳುವುದಕ್ಕೆ ಬೇಗ ಅನುಕೂಲವಾಗುತ್ತದೆ. ನಾನು ಆಸೆ ಮಾಡಿದ್ದೇನೆ. ಕೇಂದ್ರ ಸರ್ಕಾರದವರೂ ಯಾವುದೇ ರೀತಿಯಿಂದ ಇದಕ್ಕೆ ಭಂಗ ಮಾಡುವುದಿಲ್ಲವೆಂದು. ಇನ್ನು ಮಾನ್ಯ ಸದಸ್ಯರ ಕೊನೆ ಪ್ರಶ್ನೆಗೆ ಯಾವ ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದೀರಿ ಎಂದು ಕೇಳಿದ್ದಾರೆ. ಸುಲಭದಲ್ಲಿ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬಹುದೋ ಆ ಎಲ್ಲಾ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆಂದು ಹೇಳಲು ಇಷ್ಟಪಡುತ್ತೇನೆ. ಕಾಫಿ ಬೋರ್ಡ್‌ನವರು ಕೊಡಬೇಕಾದ ಬಾಕಿ ಕೊಟ್ಟರೆ ಅದಕ್ಕಿಂತ ದೊಡ್ಡ ಮೊತ್ತ ಬೇರೆ ಯಾವುದೂ ಇಲ್ಲ.

ವಂಹಾಜನ್ ವರದಿಯನ್ನು ಅನುಷ್ಠಾನಗೊಳಿಸುವ ಬಗ್ಗೆ

೧೫೯೮. ಶ್ರೀ ಎ. ಬಿ. ದೇಸಾಯಿ (ಧಾರವಾಡ ಗ್ರಾಮೀಣ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಂಹಾಜನ ಆಯೋಗದ ತೀರ್ಪನ್ನು ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಒಪ್ಪಿಕೊಂಡಾಗ ವರದಿಯನ್ನು ಅನುಷ್ಠಾನಕ್ಕೆ ತರುವ ಪ್ರಥಮ ಹಂತವಾದ ರಾಜ್ಯ ಪುನರ್ ವಿಂಗಡಣಾ ನಿರ್ಜೀವರ ಕಾಯ್ದೆಯನ್ನು ತಿದ್ದುಪಡಿ ಮಾಡಲು ಅನಿವಶ್ಯಕ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?